ಗಾಢವಾಗಿ ತಟ್ಟಿರುವ ಕಲೆಗಳು. ಶಂಭು ಹೆಗಡೆ, ಪಿ.ವಿ. ಹಾಸ್ಯಗಾರರು ನನ್ನ ಟೀನೇಜಿನ ಹೀರೋಗಳು. ಸಣ್ಣವಯಸ್ಸಿನಿಂದಲೂ ನನ್ನ ಮನಸ್ಸು, ಹೃದಯ, ಇಡಿಯ ಜೀವವನ್ನು ಆವರಿಸಿದ ಕಲೆ ಅದು. ಅದರ ಬಗ್ಗೆ ಹೇಳತೀರದ ಆಕರ್ಷಣೆ.

- **ತಾಳಮದ್ದಲೆಯಲ್ಲಿ ಮಾತಿನ ಮೂಲಕ ಸಂಭಾಷಣೆಯ ಮೂಲಕ ಜಗತ್ತನ್ನು ನಿರ್ಮಿಸುವ ಕ್ರಿಯೆಯಿದೆ. ನಿಮ್ಮ 'ನಿರ್ವಾಣ' ಥರದ ಕತೆಗಳಲ್ಲಿ ಈ ಕ್ರಮ ಕಾಣುತ್ತೆ. 'ಒಂದು ಬದಿ ಕಡಲು' ಕಾದಂಬರಿಯ ಪರಿಸರಕ್ಕೂ 'ಊರುಭಂಗ'ದ ಪರಿಸರಕ್ಕೂ ಸಾಕಷ್ಟು ವ್ಯತ್ಯಾಸವಿದೆ. ನೀವು ಊರಿನ ಕತೆ ಬರೆಯುವಾಗ ಪರಿಸರವನ್ನು ಕಟ್ಟಿಕೊಡುತ್ತೀರ. ಆದರೆ ಕಾರ್ಪೊರೇಟ್ ಜಗತ್ತಿನ ಕತೆ ಬರೆಯುವಾಗ ಪಾತ್ರಗಳ ಮನೋರಚನೆ, ತುಮುಲ, ಸಂಕೀರ್ಣತೆಗಳನ್ನು ಕಟ್ಟಿಕೊಡುತ್ತೀರ. ಈ ಎರಡೂ ಕ್ರಮಗಳಲ್ಲಿ ಸಾಕಷ್ಟು ವ್ಯತ್ಯಾಸವಿದೆ. ಇದು ಯಾಕೆ?**

ಒಂದು ಪರಿಸರವನ್ನು ಯಾಕೆ ಕಟ್ಟಿಕೊಡುತ್ತೇವೆ? ಕಥನದಲ್ಲಿ ಅದಕ್ಕೊಂದು ಮಹತ್ವದ ಸ್ಥಾನವಿರುವುದರಿಂದ. ಅಂದರೆ, ಅತ್ಯಂತ ಕಡಿಮೆ ಶಬ್ದಗಳಲ್ಲಿ ಕತೆಗೆ ಅಗತ್ಯವಾದದ್ದನ್ನು ಅದು ಉದ್ದೀಪಿಸುತ್ತಿರಬೇಕು. 'ಒಂದು ಬದಿ ಕಡಲು' ಥರದ ಕತೆಗಳು ಕನ್ನಡದ್ದೇ ಕತೆಗಳಾಗಿರುವುದರಿಂದ ಅಂಥಲ್ಲಿ ಅದು ಸಹಜವಾಗಿ ಸಾಧ್ಯವಾಗುತ್ತದೆ. ಅದೇ ನೀವು ಕಾರ್ಪೊರೇಟ್ ಜಗತ್ತಿಗೆ ಬಂದರೆ ಅಲ್ಲಿ ಕನ್ನಡವಿಲ್ಲ. ಕನ್ನಡಿಗರಿಲ್ಲ ಅಂತಲ್ಲ, ಕನ್ನಡತನ ಇಲ್ಲ. ಕತೆಗಾರನಿಗೂ ಓದುಗನಿಗೂ ಒಂದು ಸಮಾನವಾದ ಪಾತಳಿಯ ಸೃಷ್ಟಿ ಕೂಡ ಪರಿಸರವನ್ನು ಕಟ್ಟುವುದರ ಉದ್ದೇಶ. ಕಾರ್ಪೊರೇಟ್ ಜಗತ್ತಿನಲ್ಲಿ ಕನ್ನಡ ಸಹಜವಾಗಿ ಲಭ್ಯವಿಲ್ಲ. ಅಂಥ ಪರಿಸರವನ್ನ ತರುವುದಕ್ಕೆ ಹೋದರೆ ಅವಶ್ಯಕತೆಗಿಂತ ಹೆಚ್ಚಿನ ವಿವರಗಳನ್ನ ಕೊಡಬೇಕಾಗುತ್ತದೆ. ಹಾಗಾದದ್ದೇ ಕತೆಯ ಓದು ಎಡವುತ್ತದೆ. ಬರವಣಿಗೆ ಅನಗತ್ಯವಾಗಿ ದೀರ್ಘವೂ ನಿಸ್ಸಾರವೂ ಆಗುತ್ತದೆ. ನನ್ನ 'ಹುಲಿಸವಾರಿ' ಕತೆಯ ಮೊದಲ ಕರಡು ಅನುವಾದಿತ ಕತೆಯ ಥರ ಓದಿಸಿಕೊಂಡಿತು. ಎಷ್ಟೊಂದು ಬಾರಿ ತಿದ್ದಿ ಅದನ್ನು ಹದಗೊಳಿಸಬೇಕಾಯ್ತು. ನಾನು ಈಗ ಆ ಕತೆಯನ್ನು ಬರೆದರೆ ಇನ್ನೂ ಚೆನ್ನಾಗಿ ಮೂಡಿಬರಬಹುದು ಅನ್ನಿಸುತ್ತದೆ. ಯಾಕೆಂದರೆ ಈಗ ಕನ್ನಡವು ಆ ಜಗತ್ತನ್ನು ಸ್ವಲ್ಪಮಟ್ಟಿಗೆ ಹೀರಿಕೊಂಡಿದೆ. ಬಳಕೆಯಿಂದ ಆ ಜಗತ್ತಿನ ಅನೇಕ ಶಬ್ದಗಳು ಮತ್ತು ನುಡಿಗಟ್ಟುಗಳು ತಮ್ಮ ಪೆಡಸುತನವನ್ನು ಕಳಕೊಂಡು ಕೈಗೆಟುಕುವಂತಾಗಿವೆ.

- **'ಹುಲಿಸವಾರಿ' ಕತೆಯ ಬಗ್ಗೆ ಹೇಳಿದಿರಿ. 'ನಿರ್ವಾಣ', 'ಊರುಭಂಗ' ಎಲ್ಲ ಕತೆಗಳಲ್ಲೂ ಒಂದು ಅಟ್ಟರ್ ಹೆಲ್ಪ್‌ಲೆಸ್‌ನೆಸ್ ಇದೆ. ಅಸಹಾಯಕತೆ. ಮನುಷ್ಯ ಟ್ರ್ಯಾಪ್ ಆಗಿಬಿಡುವ ದುರಂತವಿದೆ. ಇಂದಿನ ಜಾಗತೀಕರಣದ ಕತೆಗಳಿಗೆ ಇಂಥ ಅಸಹಾಯಕತೆಯಿಂದ ಬಿಡುಗಡೆ ಇದೆಯಾ?**

ಇದು ಬಹಳ ದೊಡ್ಡ ಟ್ರ್ಯಾಪ್. ಸುಲಭದಲ್ಲಿ ಇದರಿಂದ ಬಿಡುಗಡೆ ಸಾಧ್ಯವಿಲ್ಲ. ಜಾಗತೀಕರಣದ ಆಂತರ್ಯವು ಮನುಷ್ಯನ ಕೆಲವು ಮೂಲಭೂತ ದೌರ್ಬಲ್ಯಗಳೊಂದಿಗೆ ತಳುಕು ಹಾಕಿಕೊಂಡಿದೆ. ನಾವದನ್ನು ಕಪ್ಪು–ಬಿಳಿಯಾಗಿ ನೋಡುವುದಕ್ಕೆ ಸಾಧ್ಯವಿಲ್ಲ. ಅದರ ಕೊಂಡಿಗಳೆಲ್ಲ ಎಷ್ಟು ಕಡೆ ಹರಡಿಕೊಂಡಿದೆಯೆಂದರೆ ಬಹುಶಃ ಅದನ್ನು ಅರ್ಥಮಾಡಿಕೊಳ್ಳಲು ಫಿಲಾಸಫಿಯತ್ತ ಮುಖ ಮಾಡಬೇಕು ಅನ್ನಿಸುತ್ತದೆ. ಜಾಗತೀಕರಣದ ಬಗ್ಗೆ ಮೊಟ್ಟಮೊದಲು ಪ್ರತಿರೋಧ ಬಂದಿದ್ದು ಪ್ರಥಮ ಜಗತ್ತಿನ ದೇಶಗಳಿಂದಲೇ. 2008ರಲ್ಲಿ ಆರ್ಥಿಕ ಬಿಕ್ಕಟ್ಟು ಉಂಟಾದಾಗ ಜನರು ಬೇರೆ ರೀತಿಯಲ್ಲಿ ಯೋಚಿಸುವುದಕ್ಕೆ ಶುರು ಮಾಡಿದರು. ಒಂದು ದೊಡ್ಡ ಆಘಾತ ಆಗದ ಹೊರತು ಇದರಿಂದ ಬಿಡುಗಡೆ ಹೊಂದುವುದರ ಬಗ್ಗೆ ನಾವು ಯೋಚನೆ ಕೂಡ ಮಾಡುವುದಿಲ್ಲ. ಅಂಥದ್ದೊಂದು ಆಘಾತವಾದಾಗ ಬಹುಶಃ ಏನಾದರೂ ಸಾಧ್ಯವಾಗಬಹುದು.